ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಹಿಪ್ಪರಗಿ ಆಣೆಕಟ್ಟಿನ ಎಡ ಹಾಗೂ ಬಲ ತುದಿಯಲ್ಲಿ ೫೧೫ ಕಿಲೋಮೀಟರ್ ಮಣ್ಣಿನ ಒಡ್ಡಿನ ಕಾಮಗಾರಿ ಮುಗಿದಿದೆ ಎಂದಾಗ ಇದು ಕೇವಲ ೫೦ ಲಕ್ಷ ರೂಪಾಯಿಗಳ ಹಣದಲ್ಲಿ ಮುಗಿದಿರಲಿಕ್ಕಿಲ್ಲ ಎಂದು ನನ್ನ ಅಭಿಪ್ರಾಯ. ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು. ಸ್ಪಿಲ್‌ವೇ ತಳಪಾಯದ ಕಾನ್‌ಕ್ರೀಟ್‌ನ್ನು ಯಾವ ವರ್ಷದಲ್ಲಿ ಹಾಕಲಾಯಿತು? ಈ ವರ್ಷ ಒದಗಿಸಿದ ೫೦ ಲಕ್ಷ ರೂಪಾಯಿಗಳಲ್ಲಿ, ಕಳೆದ ಐದು ತಿಂಗಳಲ್ಲಿ ಈ ರಿಸರ್ವಾಯರ್ ಕೆಲಸಕ್ಕೆ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ಮೂರು ಕಾಂಪೊನೆಂಟ್ಸ್ ಇದೆ. ಎರಡು ಲಿಫ್ಟ್ ಇರಿಗೇಷನ್, ಒಂದು ರಿಸರ್ವಾಯರ್. ಡ್ಯಾಮ್ ಕಟ್ಟತಕ್ಕದ್ದು ಬೇರೆ. ಆದರೆ ಅದಕ್ಕೆ ಮೊದಲು ಫೌಂಡೇಷನ್ ಮುಗಿಸಿಕೊಳ್ಳಬೇಕು. ಇದಕ್ಕೆ ಕಾರಣ ಇಷ್ಟೇ, ಆಲಮಟ್ಟಿ ಆಣೆಕಟ್ಟು ೧೭೨೦ ಅಡಿಗೆ ಹೋದಾಗ, ಇಲ್ಲಿ ನೀರು ತುಂಬಿಕೊಳ್ಳುತ್ತದೆ ಆಮೇಲೆ ಫೌಂಡೇಷನ್ ಮಾಡಲು ಆಗುವುದಿಲ್ಲ. ಹತ್ತು ವರ್ಷದಿಂದ ಆ ಕೆಲಸ ಆಗುತ್ತಿತ್ತು. ಫೌಂಡೇಷನ್ ಗ್ರೌಂಡ್‌ವೆಲ್‌ಗೆ ಬಂತು. ಅಷ್ಟಕ್ಕೇ ನಿಂತು ಹೋಯಿತು. ಅಲ್ಲಿ ಖರ್ಚು ಮಾಡಿರುವ ಹಣ ನಾಲ್ಕು ಕೋಟಿ ರೂಪಾಯಿಗಳು. ಈ ಸಾರಿ ನಿಮ್ಮ ಒತ್ತಾಯದ ಮೇಲೆ ೫೦ ಲಕ್ಷ ರೂಪಾಯಿಗಳ ದುಂಡು ಇಟ್ಟಿದ್ದೇವೆ. ಕೇಂದ್ರ ಸರಕಾರದ ಮಂತ್ರಿಗಳು ಇದರ ಬಗ್ಗೆ ಆಸಕ್ತಿ ಇಟ್ಟುಕೊಂಡಿದ್ದಾರೆ. ಇದಕ್ಕೆ ಹೇಗಾದರೂ ಹಣ ಕೊಡಿಸಿಕೊಳ್ಳಬೇಕೆಂದು ಸರಕಾರದ ಇರಾದೆ ಇದೆ, ಪ್ರಯತ್ನ ಮಾಡೋಣ.

ಬೆಳೆ ವಿಮೆ ಯೋಜನೆ

೬೩. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫–೮೬ನೇ ವರ್ಷದಲ್ಲಿ ಕಡ್ಡಾಯ ಬೆಳೆ ವಿಮೆ ಯೋಜನೆ ಜಾರಿಗೆ ಬಂದಿದ್ದು ಅದರಿಂದಾಗಿ ೧) ಸಹಕಾರಿ ಸಂಸ್ಥೆಗಳ ಮೂಲಕ ೨) ಗ್ರಾಮೀಣ ಬ್ಯಾಂಕುಗಳ ಮೂಲಕ ೩) ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಎಷ್ಟೆಷ್ಟು ರೈತರು ಎಷ್ಟೆಷ್ಟು ಎಕರೆ ಭೂಮಿಗೆ ವಿಮೆ ಮಾಡಿಸಿದ್ದಾರೆ?

(ಜಿಲ್ಲಾವಾರು ವಿವರ ಒದಗಿಸಬೇಕಾಗಿ ಕೋರಿಕೆ),

ಆ) ಬೆಳೆ ವಿಮೆ ಯೋಜನೆಗಳಿಂಳಗಾದವರಲ್ಲಿ ಪರಿಹಾರಕ್ಕಾಗಿ ಅರ್ಜಿ ಬಂದಿದೆಯೆಂ ? ಹಾಗಿದ್ದಲ್ಲಿ ಮಂಜೂರಾದ ಪರಿಹಾರ ಎಷ್ಟು ಹಾಗೂ ಯಾವ ಜಿಲ್ಲೆಗಳಲ್ಲಿ ಪರಿಹಾರ ಸಿಕ್ಕಿದೆ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು),—

ಅ) ೧೯೮೫–೮೬ ರಿಂದ ರಾಜ್ಯದಲ್ಲಿ ಸಮಗ್ರ ಬೆಳೆ ವಿಮಾ ಯೋಜನೆಗೆ ಜಾರಿಗೆ ಬಂದಿದ್ದು ಈ ಯೋಜನೆಯಡಿಯಲ್ಲಿ ೮೫–೮೬ರ ಮುಂಗಾರು ಹಿಂಗಾರು ಮತ್ತು ಬೇಸಿಗೆಯಲ್ಲಿ ವಿವಿಧ ಹಣಕಾಸು ಸಂಸ್ಥೆಗಳ ಮೂಲಕ ವಿಮೆ ಯೋಜನೆಗೆ ಒಳಪಟ್ಟ ರೈತರ ಸಂಖ್ಯೆ ಹಾಗೂ ಕ್ಷೇತ್ರಗಳ ವಿಸ್ತೀರ್ಣಗಳ ವಿವರ ಈ ಕೆಳಕಂಡಂತಿದೆ.

ಋತುಮಾನ	ವಿಮೆ ಮಾಡಿಸಿದ ರೈತರ ಸಂಖ್ಯೆ	ವಿಮೆ ಮಾಡಿಸಿದ ಕ್ಷೇತ್ರದ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
ಮುಂಗಾರು	೭೭೦೭೬	೧ ೪೯,೫೮೧–೨೧
ಹಿಂಗಾರು	೨೬೬೯	೭,೨೫೧–೨೫
ಬೇಸಿಗೆ	೧೦೯೬೭	೧೭,೩೨೬–೭೮
ಒಟ್ಟು	೯೦೭೧೨	೧,೭೪,೧೫೯–೨೪

೧೯೪೫–೮೬ರ ಮುಂಗಾರಿನಲ್ಲಿ ವಿವಿಧ ಪಣಕಾಸು ಸಂಸ್ಥೆಗಳ ಮೂಲಕ ಬೆಳೆ ವಿಮೆ ಮಾಡಿದ ವಿವರ ಈ ಕೆಳಕಂಡಂತಿದೆ.

ಅನುಬಂಧ–೨

ಸಂಸ್ಥೆಯ ಹೆಸರು	ವಿಮೆ ಮಾಡಿಸಿದ ರೈತರ ಸಂಖ್ಯೆ	ವಿಮೆ ಮಾಡಿಸಿದ ಕ್ಷೇತ್ರದ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
ವಾಣಿಜ್ಯ ಬ್ಯಾಂಕುಗಳು	೨೯,೫೨೯	೬೨,೦೯೯–೯೮
ಸಹಕಾರಿ ಬ್ಯಾಂಕುಗಳು	೨೨,೨೬೩	೪೮,೫೨೮–೬೦
ಗ್ರಾಮೀಣ ಬ್ಯಾಂಕುಗಳು	೨೫,೩೮೪	೩೮,೯೫೨–೬೩
ಒಟ್ಟು	೭೭,೦೭೬	೧,೪೯,೫೮೧–೨೧

ಜಿಲ್ಲಾವಾರು ವಿವರಗಳನ್ನು ಅನುಬಂಧ-೧ ರಲ್ಲಿ ಕೊಡಲಾಗಿದೆ. ೧೯೮೫–೮೬ರ ಹಿಂಗಾರು–ಬೇಸಿಗೆಯ ಬೆಳೆ ವಿಮೆಯ ಜಿಲ್ಲಾವಾರು ವಿವರಗಳನ್ನು ಭಾರತ ವಿಮಾ ನಿಗಮದವರು ಇನ್ನೂ ಒದಗಿಸಬೇಕಾಗಿದೆ.

೮) ಬೆಳೆ ವಿಮೆ ನಿಯಮದ ಪ್ರಕಾರ, ಪರಿಹಾರಕ್ಕಾಗಿ ರೈತರು ಅರ್ಜಿ ಸಲ್ಲಿಸಬೇಕಾಗಿಲ್ಲ. ೧೯೮೫–೮೬ರ ಮಂಗಾರಿನಲ್ಲಿ ಈ ಯೋಜನೆ ಜಾರಿಯಲ್ಲಿದ್ದು ೧೮ ಜಿಲ್ಲೆಗಳ ಪೈಕಿ ೧೭ ಜಿಲ್ಲೆಗಳ ರೈತರಿಗೆ ೨,೮೭,೫೦,೬೧೬–೨೭ ರೂಗಳ ಪರಿಹಾರ ಕೊಡಲಾಗಿದೆ. ಜಿಲ್ಲಾವಾರು ಪರಿಹಾರಗಳ ವಿವರ ಅನುಬಂಧ–೨ ರಲ್ಲಿ ಲಗತ್ತಿಸಿದೆ.

ಅನುಬಂಧ

೧೯೮೫ರ ಮುಂಗಾರಿನ ಹಂಗಾಮಿನಲ್ಲಿ ಬೆಳೆ ವಿಮಾ ಮಾಡಿಸಿದ ರೈತರ ಸಂಖ್ಯೆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಾಣಿಜ್ಯ ಬ್ಯಾಂಕುಗಳು		ಸಹಕಾರಿ ಬ್ಯಾಂಕುಗಳು	
		ರೈತರ ಸಂಖ್ಯೆ	ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	ರೈತರ ಸಂಖ್ಯೆ	ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
೧	೨	೩	೪	೫	೬
೧	ಗುಲ್ಬರ್ಗ	೯೮೩	೨೪೯೯–೬೧	೩೦೮	೧೦೬೧–೮೦
೨	ಮೈಸೂರು	೧೭೮೪	೨೦೬೩–೮೯	೨೬೩	೩೨೩–೬೦
೩	ಬಳ್ಳಾರಿ	೨೧೨೩	೫೦೪೪–೪೩	೭೮೭	೮೧೭–೦೦
೪	ಬೆಳಗಾಂ	೭೬೪	೮೩೪–೯೦	—	—
೫	ಧಾರವಾಡ	೪೬೬೫	೧೧೬೩೮–೧೬	—	—
೬	ಚಿತ್ರದುರ್ಗ	೨೦೮೫	೪೪೪೭–೪೭	೧೩೦೦	೩೦೬೧–೦೫
೭	ಬಿಜಾಪುರ	೩೫೯	೧೧೮೧–೨೬	೩೨೦	೯೨೨–೦೦
೮	ಬೀದರ್	೩೪	೩೬–೪೧	೭೪೯೨	೧೬೨೧೯–೦೦
೯	ಚಿಕ್ಕಮಗಳೂರು	೨೧೦೫	೪೩೪೭–೩೦	೨೯೫	೮೪೨–೨೧
೧೦	ಶಿವಮೊಗ್ಗ	೬೯೮೩	೧೪೦೧೮–೭೧	೭೫೪	೪೯೬–೨೭
೧೧	ರಾಯಚೂರು	೨೧೨೦	೪೯೨೩–೩೩	೨೬೧	೫೦೫–೦೧
೧೨	ಕೋಲಾರ	೪೦೬	೫೩೭–೨೯	೨೯೧೦	೩೨೭೦–೯೩
೧೩	ಹಾಸನ	೧೧೪೮	೭೧೫೩–೫೬	೫೯೭	೭೭೦–೩೭
೧೪	ಬೆಂಗಳೂರು	೩೪೪	೪೦೯–೫೫	೪೦	೭೧–೯೮
೧೫	ತುಮಕೂರು	೧೦೧೩	೧೧೩೬–೮೦	೪೯೨೬	೧೭೭೫೯–೭೪
೧೬	ಕೊಡಗು	೧೩೩೮	೩೮೧೭–೬೯	—	—
೧೭	ಉತ್ತರ ಕನ್ನಡ	೪೧೮	೧೨೬೦–೩೪	—	—
೧೮	ದಕ್ಷಿಣ ಕನ್ನಡ	೮೫೭	೧೭೫೯–೨೮	೨೦೦	೨೪೦೭–೬೪
	ಒಟ್ಟು	೨೯೫೨೯	೬೨೦೯–೯೮	೨೨೬೬೩	೪೮೫೨೮–೬೦

–೧

ಹಾಗೂ ವಿಸ್ತೀರ್ಣದ ಜಿಲ್ಲಾವಾರು ವಿವರಗಳ ಪಟ್ಟಿ

ಗ್ರಾಮೀಣ ಬ್ಯಾಂಕುಗಳು		ಒಟ್ಟು	
ರೈತರ ಸಂಖ್ಯೆ	ವಿಸ್ತೀರ್ಣ (ಹೆಕ್ಟೇರು ಗಳಲ್ಲಿ)	ರೈತರ ಸಂಖ್ಯೆ	ವಿಸ್ತೀರ್ಣ (ಹೆಕ್ಟೇರು ಗಳಲ್ಲಿ)
೭	೮	೯	೧೦
೧೮೬	೨೬೧–೦೮	೧೪೭೭	೩೮೧೨–೪೯
೯೪೦	೯೯೬–೪೯	೨೯೮೭	೩೩೮೩–೯೮
೪೦೫೩	೭೫೫೪–೬೫	೬೯೩೩	೧೩೪೧೬–೦೮
೧೧೭೭	೧೧೨೭–೨೪	೧೯೪೧	೧೯೬೨–೧೪
೪೯೬೯	೭೨೪೧–೮೧	೯೬೩೪	೧೮೮೭೯–೯೭
೪೦೫೦	೭೨೬೯–೫೯	೭೪೫೫	೧೪೭೭೮–೧೧
೨೬೦	೩೫೯–೨೮	೯೩೯	೨೪೬೨–೫೪
೨೯೪	೩೭೩–೨೫	೭೮೨೦	೧೬೬೨೮–೬೬
೩೬೧	೩೦೮–೧೫	೨೭೬೧	೫೪೯೭–೬೬
೧೩೮೫	೧೪೧೮–೮೭	೯೧೨೨	೧೫೯೨೩–೮೫
೫೯೧೨	೧೦೨೫೮–೭೭	೮೨೯೩	೧೫೬೮೭–೧೧
೭೭೩	೯೧೬–೧೦	೪೦೮೯	೪೭೨೪–೩೩
೨೭೫	೧೭೧–೬೮	೨೦೨೦	೩೧೫–೬೧
೮೮	೮೪–೭೦	೪೭೨	೫೭೬–೨೩
೩೯೨	೪೨೦–೯೫	೬೩೨೧	೧೯೩೧೭–೪೯
೧೫೩	೧೭೭–೯೮	೧೪೯೧	೩೯೯೫–೬೭
೨	೨–೨೮	೪೨೦	೧೨೬೨–೬೨
೧೪	೧೯–೭೫	೨೮೮೧	೪೧೮೬–೬೭
೨೫೨೮೪	೩೮೯೫೨–೬೩	೭೭೦೭೬	೧೪೯೫೫೧–೨೧

ಅನುಬಂಧ–೨

ಜಿಲ್ಲಾವಾರು ಪರಿಹಾರ ಹಣ ನೀಡಿದ ವಿವರದ ಪಟ್ಟಿ (ಮುಂಗಾರು ೨೫–೨೬)

ಕ್ರಮ ಸಂಖ್ಯೆ	ಜಿಲ್ಲೆ		ಪರಿಹಾರ ಹಣದ ಮೊತ್ತ ರೂ ಪೈ.
೧	೨		೩
೧	ಬೆಂಗಳೂರು	...	೧,೪೫,೬೫೩–೬೧
೨	ಮೈಸೂರು	..	೧೦,೨೬,೩೪೨–೮೬
೩	ಹಾಸನ	...	೫,೫೩,೦೯೫–೫೯
೪	ಚಿಕ್ಕಮಂಗಳೂರು	...	೩,೧೫,೫೪೮–೯೦
೫	ಕೋಲಾರ	...	೨೦,೭೯,೭೧೫–೯೦
೬	ಕೊಡಗು	...	೫೨,೩೦೨–೩೩
೭	ತುಮಕೂರು	...	೧೪,೨೯,೯೪೨–೭೫
೮	ಚಿತ್ರದುರ್ಗ	...	೧೭,೬೬,೨೨೫–೬೧
೯	ಶಿವಮೊಗ್ಗ	...	೧೧,೭೪.೬೭೫–೫೩
೧೦	ಧಾರವಾಡ	...	೧,೨೫,೯೦,೫೩೦–೨೭
೧೧	ಬೆಳಗಾಂ	...	೧೪,೭೫೭–೫೮
೧೨	ಗುಲ್ಬರ್ಗಾ	...	೯,೯೫,೬೮೫–೪೯
೧೩	ಬಿಜಾಪುರ	...	೫,೨೯,೮೪೬–೦೮
೧೪	ರಾಯಚೂರು	...	೧,೭೭,೦೪೧–೦೩
೧೫	ಬಳ್ಳಾರಿ	...	೫೨,೧೪,೫೦೬–೮೯
೧೬	ಬಿದರೆ	...	೩,೪೦,೩೩೫–೩೫
೧೭	ಉತ್ತರ ಕನ್ನಡ	...	೩,೪೪,೪೦೦–೫೦
		ಮೊತ್ತ	೨,೮೭,೫೦,೬೧೬–೨೭

ಶ್ರೀ ಕೆ. ಹೆಚ್. ಪಾಟೀಲ್.—ಈ ಇನ್‌ಶೂರೆನ್ಸ್ ಹಣವನ್ನು ನೀವು ತಂಬಿದ್ದುದು ಯಾವಾಗ? ಪ್ರತ್ಯಕ್ಷವಾಗಿ ಪರಿಹಾರ ಸಿಕ್ಕಿದ್ದು ಎಷ್ಟು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರು ಕೇಳುವಂಥ ಮಾಹಿತಿ ನನ್ನ ಹತ್ತಿರ ಇಲ್ಲ. ತರಿಸಿಕೊಡುತ್ತೇನೆ.

ಶ್ರೀ ಜಿ. ಎಸ್. ಆಚಾರ್.—ಇದು ಬೆಳೆ ವಿಮೆಯೋ ಅಥವಾ ಬೆಳೆ ಸಾಲದ ವಿಮೆಯೋ ಎನ್ನುವ ಬಗ್ಗೆ ನನಗೆ ಸ್ಪಷ್ಟೀಕರಣ ಆಗತ್ಕ. ಸಂಕಷ್ಟಕ್ಕೀಡಾದ ರೈತರುಗಳಿಗೆಲ್ಲಾ ಬೆಳೆ ವಿಮೆ ಕೊಡುವ ಅವಕಾಶ ಇದೆಯೋ ಅಥವಾ ಯಾವ ರೀತಿ ಅವರಂಗಳನ್ನು ಗುರುತಿಸಿ ವಿಮೆಯನ್ನು ಕೊಡುತ್ತಿದ್ದೀರಿ ಎಂದು ತಿಳಿಸ ಬೇಕು. ಮಾನ್ಯ ಸಚಿವರು ಉತ್ತರ ಕೊಡುವಾಗ ೧೯೮೫–೮೬ರ ಮುಂಗಾರು ಹಿಂಗಾರು ಮತ್ತು ಬೇಸಿಗೆ ಯಲ್ಲಿ ಒಟ್ಟು ೯೦,೭೧೨ ಜನರು ಬೆಳೆ ವಿಮೆಯನ್ನು ಮಾಡಿಸಿದ್ದಾರೆ, ಒಟ್ಟು ವಿಮೆ ಮಾಡಿಸಿದ ಜಮೀನು ಎಷ್ಟು ಎಂದರೆ ೧,೭೪,೧೫೯,೨೪ ಹೆಕ್ಟೇರ್ ಎಂದು ತಿಳಿಸಿದ್ದಾರೆ. ಆದರೆ ೧೯೮೫–೮೬ರ ಮುಂಗಾರಿನಲ್ಲಿ ವಿವಿಧ ಹಣಕಾಸು ಸಂಸ್ಥೆಗಳ ಮೂಲಕ ಬೆಳೆ ವಿಮೆ ಪಡೆದ ರೈತರ ಸಂಖ್ಯೆ ೭೭,೦೭೬ ಎಂದು ಇದೆ. ಹಾಗೆಯೇ ಜಮೀನಿನ ವಿಸ್ತೀರ್ಣ ೧,೪೯,೫೮೧–೨೧ ಹೆಕ್ಟೇರ್ ಎಂದು ಇದೆ. ಮೇಲೆ ತಿಳಿಸಿರುವ ಸಂಖ್ಯೆಗೂ ಈ ಸಂಖ್ಯೆಗೂ ವ್ಯತ್ಯಾಸ ಇದೆ. ಇದು ಯಾವ ರೀತಿ ವ್ಯತ್ಯಾಸ ಬಂದಿದೆ ಎಂದು ಸ್ಪಷ್ಟೀ ಕರಣ ಕೊಡಬೇಕು. ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮೀಣ ಬ್ಯಾಂಕಿನಿಂದ ಕೇವಲ ೧೪ ಜನ ರಿಗೆ ಮಾತ್ರ ಬೆಳೆ ವಿಮೆಯನ್ನು ಮಾಡಿಸಲಾಗಿದೆ. ಇಷ್ಟು ಕಡಿಮೆಯಾಗಲಿಕ್ಕೆ ಕಾರಣ ಏನು ? ಕೊನೆ ಯದಾಗಿ ಕೇಳುವಂಥಾದ್ದು ಏನೆಂದರೆ, ೧೯೮೫–೮೬ರಲ್ಲಿ ೧೪ ಜಿಲ್ಲೆಗಳ ಪೈಕಿ ೧೭ ಜಿಲ್ಲೆಗಳ ರೈತರಿಗೆ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳಲಾಗಿದೆ. ಪರಿಹಾರ ಕೊಟ್ಟ ರೈತರಿಂದ ಪ್ರೀಮಿಯಂ ಆಗಿ ಎಷ್ಟು ಹಣವನ್ನು ಪಡೆಯಲಾಗಿದೆ ಎಂಬ ಬಗ್ಗೆ ಇದರಲ್ಲಿ ವಿವರವನ್ನು ಕೊಟ್ಟಿಲ್ಲ. ಅದರ ವಿವರವನ್ನು ಕೊಡಬೇಕು. ಅದೂ ಅಲ್ಲದೆ ಮಂಡ್ಯ ಜಿಲ್ಲೆಯನ್ನು ಈ ಯೋಜನೆಯಿಂದ ಕೈ ಬಿಡಲಾಗಿದೆ. ಅದು ಏತಕ್ಕೆ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೆ, ಇದು ಸಾಲದ ಮೇಲಿರತಕ್ಕಂಥ ವಿಮೆ ಯೋಜನೆಯೇ ಹೊರತು ಬೆಳೆ ಮೇಲೆ ಇರತಕ್ಕಂಥ ವಿಮೆ ಯೋಜನೆಯಲ್ಲ. ಇನ್ನೂ ಎರಡನೆಯ ದಾಗಿ ಹೇಳುವುದಾದರೆ, ನಾವು ಪ್ರತಿಯೊಂದು ಹೊಲದ ಹತ್ತಿರವೂ ಹೋಗಿ ಬೆಳೆ ಯಾವ ರೀತಿ ಆಗಿದೆ ಎಂಬುದನ್ನು ಪರಿಶ್ಲಿಸುವುದಕ್ಕಾಗುವುದಿಲ್ಲ. ಈ ಬೆಳೆ ವಿಮೆ ಯೋಜನೆಯೂ ಕೇಂದ್ರ ಸರ್ಕಾರದ ನೀತಿ ಯಾಗಿರತಕ್ಕಂಥಾದ್ದು, ನಾವು ಪ್ರತಿಯೊಂದು ಹೊಲಕ್ಕೂ ಹೋಗಿ ಗುರುತಿಸುವುದಕ್ಕೆ ಬಹಳ ಕಷ್ಟ ವಾಗುತ್ತದೆ. ಅದಕ್ಕಾಗಿ ತಾಲ್ಲೂಕುವಾರು ಇದರಲ್ಲಿ ಅಂಕಿ ಸಂಖ್ಯೆಗಳನ್ನು ಪಡೆದು ಕೊಡಲಾಗಿದೆ. ಇನ್ನು ಮಂಡ್ಯ ಜಿಲ್ಲೆಯನ್ನು ಈ ಯೋಜನೆಯಿಂದ ಕೈಬಿಡಲಾಗಿದೆ ಏಕೆಂದು ಮಾನ್ಯ ಸದಸ್ಯರು ಕೇಳಿ ದ್ದಾರೆ. ಈ ಯೋಜನೆಯನ್ನು ಈಗತಾನೆ ಹೊಸದಾಗಿ ಪ್ರಾರಂಭ ಮಾಡಿದ್ದೇವೆ. ಇನ್ನು ಮುಂದೆ ಮಂಡ್ಯ ಜಿಲ್ಲೆಯನ್ನು ಈ ಯೋಜನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎಸ್. ಆಚಾರ್.—ಅಂಕಿ ಸಂಖ್ಯೆಗಳನ್ನು ಹೇಳುವುದಾದರೆ, ಸಂಪೂರ್ಣವಾಗಿ ಪೇ ಬೇಕು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಇದೂ ಹೊಸ ಯೋಜನೆಯಾಗಿರುವುದರಿಂದ, ಇನ್ನು ಮುಂದೆ ಸರಿಯಾಗಿ ವ್ಯವಸ್ಥೆ ಮಾಡುವುದಕ್ಕೆ ವಿಪ್ರಾರ್ಡು ಮಾಡುತ್ತೇನೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ಮಾನ್ಯ ಆಚಾರ್‌ರವರೇ ದಯವಿಟ್ಟು ನೀವು ಕುಳಿತುಕೊಳ್ಳಿ ಮಾನ್ಯ ಭೂಪತಿಯವರೆ ತಾವು ಕೇಳಿರಿ.

ಶ್ರೀ ಯು. ಭೂಪತಿ.—ಮಳೆಯ ಮೇಲೆ ಆಧಾರವಾಗಿರತಕ್ಕಂಥ ಭೂಮಿಗಳಲ್ಲಿ ಬೆಳೆಗಳು ಬಂದಿಲ್ಲ. ಕೆಲವು ಸಾರಿ ಪಂಪು ಸೆಟ್ಟುಗಳು ಇರುವ ಭೂಮಿಯಲ್ಲೂ ಸಹ ಬೆಳೆಗಳು ಆಗದೆ ಇದ್ದ ಸಂದರ್ಭ ಉಂಟು. ಪಂಪು ಸೆಟ್ಟುಗಳು ಇರುವ ಭೂಮಿಯಲ್ಲಿ ಬೆಳೆಗಳು ಬಂದಿಲ್ಲವೆಂದು ಬೆಳೆ ವಿಮೆಗೆ ಅರ್ಜಿ ಹಾಕಿಕೊಂಡರೆ, ನಿಮ್ಮ ಭೂಮಿಯನ್ನು ನೀರಾವರಿ ಭೂಮಿ ಎಂದು ಕನ್ಸಿಡರ್ ಮಾಡಲಾಗಿರು ವುದರಿಂದ ಬೆಳೆ ವಿಮೆ ಯೋಜನೆಯಲ್ಲಿ ಅದು ಬರುವುದಿಲ್ಲ ಎನ್ನುವ ಉದಾಹರಣೆಗಳು ಇವೆ. ಆದ್ದರಿಂದ

ನಾನು ಕೇಳುವುದೇನೆಂದರೆ, ಬೆಳೆ ವಿಮಾ ಯೋಜನೆ ನೀರಾವರಿ ಪಂಪು ಸೆಟ್ಟುಗಳು ಇರುವ ಭೂಮಿಗೂ ಸೌಲಭ್ಯ ಇವೆಯೇ ? ಒಣ ಬೇಸಾಯಕ್ಕೆ ಈ ಸೌಲಭ್ಯ ಕೊಡುತ್ತಿದ್ದರೆ, ಎಲ್ಲೆಲ್ಲಿ ಈ ಸೌಲಭ್ಯಗಳನ್ನು ವಿಸ್ತರಿಸಿದ್ದೀರಿ ಯಾವ ಯಾವ ಜಿಲ್ಲೆಯಲ್ಲಿ ಇದುವರೆಗೆ ಕೊಟ್ಟಿದ್ದೀರಿ ಎನ್ನುವ ಬಗ್ಗೆ ಮಾಹಿತಿ ಕೊಟ್ಟರೆ ಒಳ್ಳೆಯದು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಅಧ್ಯಕ್ಷರೇ, ಇನ್ನು ಮುಂದೆ ಎಲ್ಲೆಲ್ಲಿ ಬೆಳೆ ವಿಮೆಯನ್ನು ಕೊಡಲಾಗುತ್ತದೆ ಎಂಬ ವಿಷಯವನ್ನು ಶಾಸಕರುಗಳ ಗಮನಕ್ಕೆ ತರತಕ್ಕ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಇದು ಒಂದು ಕಡೆ ಇರುವ ಸಮಸ್ಯೆಯಲ್ಲ. ಇದು ರಾಜ್ಯದ ಸಮಸ್ಯೆ. ಇದು ಪ್ರಾಮುಖ್ಯವಾದ ಸಮಸ್ಯೆ. ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವೇ ಬರಲಿಲ್ಲ.

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ,

ಶ್ರೀ ಆರ್. ವೆಂಕಟರಾಮಯ್ಯ.—ಇದರ ಬಗ್ಗೆ ಉತ್ತರ ಕೊಡಬೇಕು. ಇದು ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ ನಾನು ಪರವಾನಿಗಿಯನ್ನು ಮಾಡುವುದಿಲ್ಲ.

ಶ್ರೀ ಆರ್. ಎಲ್, ಜಾಲಪ್ಪ.—ಈ ವಿಷಯದಲ್ಲಿ, ಕೇಂದ್ರ ಸರ್ಕಾರದವರ ಒಂದು ಪಾಲಿಸಿ, ಮೇಲೆ ನಾವು ಇನ್‌ಶೂರೆನ್ಸ್ ಪ್ರೀಮಿಯಮ್‌ನ್ನು ತೆಗೆದುಕೊಳ್ಳುತ್ತೇವೆ. ಬೆಳೆ ವಿಮೆ ಕೊಡುವ ಬಗ್ಗೆ ಕೇಂದ್ರ ಸರ್ಕಾರದ ನೀತಿ ಏನೆಂದರೆ, ಒಂದು ಊರಿನಲ್ಲಿ ಯಾರಾದರೂ ಒಬ್ಬರಿಗೆ ಬೆಳೆ ಆಗದಿದ್ದರೆ, ಅವರಿಗೆ ವಿಮೆಯನ್ನು ಕೊಡುವುದಿಲ್ಲ. ಊರಿನಲ್ಲಿರುವ ಯಾರಿಗೂ ಬೆಳೆ ಆಗಿದಿದ್ದರೆ ಮಾತ್ರ ಬೆಳೆ ವಿಮೆಯನ್ನು ಕೊಡುವುದಕ್ಕೆ ಕೇಂದ್ರ ಸರ್ಕಾರದ ನೀತಿ ಇದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರೂ ಸಹ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಾಗದ ಬರೆದಿದ್ದಾರೆ.

ಮುಧೋಳ ತಾಲ್ಲೂಕು ಇಂಗಳಗಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆ ಕಟ್ಟಡ.

೧೯೦. ಶ್ರೀ ಬಿ. ಜಿ. ಜವಳಿಂಡಿ (ಮುಧೋಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳ್ ತಾಲ್ಲೂಕು ಇಂಗಳಗಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯನ್ನು ಯಾವಾಗ ಮಂಜೂರು ಮಾಡಲಾಯಿತು ?

ಆ) ಸದರಿ ಶಾಲಾ ಕಟ್ಟಡ ಶಿಥಿಲಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಡಿ. ವಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ೧೯೭೦ ರಲ್ಲಿ ಟಿ.ಡಿ.ಬಿ. ಯವರು ಶಾಲೆಯನ್ನು ಪ್ರಾರಂಭಿಸಿ ನಂತರ ೧೯೭೩ ರಲ್ಲಿ ಸರ್ಕಾರ ವಹಿಸಿಕೊಂಡಿದೆ.

ಆ) ಬಂದಿದೆ.

ಇ) ಬಿಜಾಪುರ ಜಿಲ್ಲಾಧಿಕಾರಿಗಳು ಈ ಶಾಲೆಯ ದುರಸ್ತಿಗಾಗಿ ೮ನೇ–೮ನೇ ರಲ್ಲಿ ರೂ. ೩೦,೦೦೦–೦೦ ರೂಪಾಯಿಗಳನ್ನು, ೮೪–೮೫ರಲ್ಲಿ ರೂ ೩೪,೦೦೦–೦೦ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ಆದರೆ ಲೋಕೋಪಯೋಗಿ ಇಲಾಖೆಯವರು ಈ ಕೆಲಸಕ್ಕೆ ಕರೆದ ಟೆಂಡರ್‌ಗೆ ಯಾರೂ ಉತ್ತರಿಸಲಿಲ್ಲ ವೆಂದು ತಿಳಿದು ಬಂದಿದೆ. ಲಭ್ಯವಿರುವ ಯೋಜನೆಯ ಅಡಿಯಲ್ಲಿ ಹೊಸದಾಗಿ ನಿರ್ಮಿಸಲು ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ.

ಶ್ರೀ ಬಿ. ಜಿ. ಜವಳಿಂಡಿ.—ಮಾನ್ಯ ಅಧ್ಯಕ್ಷರೇ, ಇಂಗಳಗಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯನ್ನು ೧೯೭೦ ರಲ್ಲಿ ಟಿ.ಡಿ.ಬಿ.ಯವರು ಕಟ್ಟಿಸುವುದಕ್ಕೆ ಪ್ರಾರಂಭಿಸಿದರು. ನಂತರ ೧೯೭೩ ರಲ್ಲಿ ಈ ಶಾಲೆಯ ಕಟ್ಟಡವನ್ನು ಕಟ್ಟುವುದಕ್ಕೆ ಲೋಕೋಪಯೋಗಿ ಇಲಾಖೆಯವರು ಅಧಿಕಾರವನ್ನು ವಹಿಸಿಕೊಂಡರು. ಕಟ್ಟಡವನ್ನು ಕಟ್ಟಲಾಗಿದೆ. ಆದರೆ ಈ ಕಟ್ಟಡವು ಈಗ ಶಿಥಿಲಗೊಂಡಿದೆ. ಈ ಶಿಥಿಲ